ತಿಡುವುದರ ಮೂಲಕ ಕಲಾವಿದರಿಗೆ ಅವಮಾನಮಾಡುವಂತಹ ಸ್ಥಿತಿಯಲ್ಲಿ ನೀವಿದ್ದೀರಿ. ಇದರಿಂದ ಅವಮಾನವಾದರೂ ಹೊಟ್ಟೆ ತುಂಬುತ್ತದೆಯೆ ಎಂದು ಕೇಳಿದರೆ 1986ನೇ ಇಸವಿಯ ನಂತರ ಯಾವುದೇ ಕಲಾವಿದರಿಗೆ ಈ ಗೌರವ ಧನವನ್ನು ನೀವು ಹೇಳುವಂತಹ ಮಾಸಾಶನವನ್ನು ಕೊಟ್ಟಿರುವಂಥಾದ್ದು ಕಾಣುವುದಿಲ್ಲ. ಇದು ಏಕೆ ಹೀಗೆ? ಈ ಯಕ್ಷಗಾನಕ್ಕೆ ಸರ್ಕಾರದಿಂದ ಏನು ಬರಬೇಕಾಗಿದೆಯೋ, ಸರ್ಕಾರದ ಅನುಗ್ರಹವಾಗಬೇಕಾಗಿದೆಯೋ, ಅದು ಆಗದೇ ಇದ್ದರೆ ಏನು ಪರಿಣಾಮವಾಗುತ್ತದೆಂಬುದನ್ನು ತಾವು ಆಗಲೇ ಹೇಳಿದ್ದೀರಿ. ಈ ಜಾನಪದ ಕಲೆ, ಸಂಸ್ಕೃತಿ ಏನಿದೆ, ಅದು ಜ್ಞಾನವನ್ನು, ಮನರಂಜನೆ ಎರಡನ್ನೂ ಕೊಡುವಂಥಾದ್ದು ಪರ್ಯಾಪ್ತವಾಗುತ್ತದೆ. ಇಂತಹ ಕಲೆಯ ವಿಷಯದಲ್ಲಿ ಈ ಅವಗಣನೆ ಏಕೆ? ಇದನ್ನು ಇನ್ನು ಎಷ್ಟು ದಿವಸಗಳಲ್ಲಿ ಕೊಡುತ್ತೀರಿ? ಈಗ ಲಿಸ್ಟ್‌ನಲ್ಲಿರುವಂತಹ ಹೆಸರುಗಳನ್ನು ನೋಡಿಕೊಂಡು ಆದ್ಯತೆಯ ಮೇಲೆ ಈ ವರ್ಷದಿಂದಲೇ ಕೊಡುವಂತಹ ಮನಸ್ಸು ಮಾಡುತ್ತೀರೋ?

ಶ್ರೀ ಎಂ.ಸಿ. ನಾಣಯ್ಯ : ನಾವು ಈ ವಿಷಯದಲ್ಲಿ ಮಾಡಬೇಕೆಂಬ ಮನಸ್ಸು ಮಾಡಿ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ. ಆದರೆ ಈ ವರ್ಷ ಏನೋ ತಾವು ಸಿಗುತ್ತಿಲ್ಲವೆನ್ನುವಂತಹ ವಿಚಾರವನ್ನು ಈ ಯಕ್ಷಗಾನಕ್ಕೆ ಸಂಬಂಧಪಟ್ಟ ಹಾಗೆ ಹೇಳುತ್ತಿದ್ದೀರಿ. ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತದೆ. ನಾವು ಈಗಾಗಲೇ 5700 ಜನರನ್ನು ಗುರುತಿಸಿ ಕೊಡಬೇಕೆಂದು ಪಟ್ಟಿಯನ್ನು ಮಾಡಿದ್ದೇವೆ. ಈಗ ತಾವು ಸಿಗುತ್ತಿಲ್ಲವೆಂಬ ವಿಚಾರವನ್ನು ಹೇಳಿದ್ದೀರಿ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಉಪಾಧ್ಯಕ್ಷರೆ, 1986ನೇ ಇಸವಿಯ ನಂತರ ಯಕ್ಷಗಾನ ಕಲಾವಿದರಲ್ಲಿ ದುಡಿಯುತ್ತಿದ್ದವರು ಈಗ ದುಡಿಯಲಾಗದೇ ನಿಶಕ್ತರಾಗಿರುವವರು ಯಾರಿದ್ದಾರೆ. ಅವರೆಲ್ಲರನ್ನು ಅವಗಣಿಸಲ್ಪಟ್ಟಿದ್ದಾರೆ, ಅವರಿಗೆ ಸಿಗುತ್ತಾ ಇಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದ ನಂತರ ಆಗಿರುವಂಥಾದ್ದು ನಾನು ಹೇಳುತ್ತಿದ್ದೇನೆ. ತಾವು ಅಪರೂಪಕ್ಕೆ ಆಗಿರುವಂಥ ಒಂದೆರಡನ್ನು ಹೇಳಬಹುದು. ಆದರೆ ಇಷ್ಟು ದೊಡ್ಡ ಸಂಖ್ಯೆಯಲ್ಲಿರುವವರು ಏನು ಮಾಡಬೇಕು. ಅವರು ರಂಗಸ್ಥಳದಲ್ಲಿ ದೇವೆಂದ್ರರಾಗಿ, ಕೃಷ್ಣರಾಗಿ, ರಾಮರಾಗಿ ಪಾತ್ರಗಳನ್ನು ಮಾಡಿ ಹೊರಗಡೆ ಬಂದು ಬೀಡಿಗಳನ್ನು ಕೇಳುವಂತಹ ಸ್ಥಿತಿ ಇದೆ.

ಶ್ರೀ ಎಂ. ಸಿ. ನಾಣಯ್ಯ : ನೀವು ಕಲಿಸುವಂತಹ ಕಲೆಯನ್ನು, ಕಲಿಸುವಂತಹ ಜನರು, ಇವೆಲ್ಲವೂ ಉಳಿಯಬೇಕೆಂಬುದು ನಮ್ಮಗಳ ಆಸೆ ಇದೆ. ಇದಕ್ಕೆ ಪೂರಕವಾಗಿ ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆದುದರಿಂದ ಮಾಸಾಶನ ಸಿಗುತ್ತಿಲ್ಲವೆಂದು ತಾವು ದಯಮಾಡಿ ಕಲೆಯನ್ನು ಮಾತ್ರ ಬಿಡಬೇಡಿ.

UPGRADATION OF SURATKAL VETERENARY DISPENSARY

182 - Sri Kumble Sunder Rao (Surathkal) : will the Ministers State for Animal Husbandary be pleased to state?

a) Whether it has come to the notice of the government that the upgraded Veterinary Dispensary has shortage of space;

b) *Whether the government is going to take action to extend Dispensary and Staff quarters;*

c) *Whether the government has intended to encourage the staff of Veterinary Dispensaries in view of they are working even on General Holidays?*

Sri B.B. Ningaiah (Minister of State for Animal Husbandry) :

a) Yes.

b) 1) No space is available for staff quarters.

2) Action will be taken to provide additional funds through Parishat for the extension of the Veterinary Dispensary.

c) As the services of the staff working in the Health Centres has been continued even on the General Holidays as in the post the question of giving encourage does not arise.

ಶ್ರೀ ಕುಂಭೈ ಸುಂದರರಾವ್ : ಮಾನ್ಯ ಉಪಾಧ್ಯಕ್ಷರೆ, ಸುರತ್ಕಲ್ ಪಶುವೈದ್ಯ ಶಾಲೆಯನ್ನು ಮೇಲ್ದರ್ಜೆಗೇರಿಸಿದ ಸರ್ಕಾರ ಅಲ್ಲಿ ಸ್ಥಳಾವಕಾಶ ಕಡಿಮೆಯಿರುವುದನ್ನು ಗಮನಿಸಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ ಉತ್ತರದಲ್ಲಿ ಹೌದು ಎಂದು ಕೊಟ್ಟಿದ್ದಾರೆ. ಅದನ್ನು ಸರ್ಕಾರ ಗಮನಿಸಿದ ಮೇಲೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದೆ, ಎಂಬ ಪ್ರಶ್ನೆಗೆ ಸಿಬ್ಬಂದಿ ವಸತಿ ಗೃಹಕ್ಕೆ ನಿವೇಶನ ಇರುವುದಿಲ್ಲ. ಚಿಕಿತ್ಸಾಲಯ ವಿಸ್ತರಣೆಗಾಗಿ ಜಿಲ್ಲಾ ಪಂಚಾಯತ್‌ನ ವಿವಿಧ ಯೋಜನೆಯಡಿಯಲ್ಲಿ ಹೆಚ್ಚುವರಿ ಹಣವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಈ ರೀತಿಯಾಗಿ ತಾವು ಉತ್ತರವನ್ನು ಕೊಟ್ಟಿದ್ದೀರಿ. ಈಗ ನನ್ನ ಪ್ರಶ್ನೆ ಏನೆಂದರೆ ಅಲ್ಲಿ ಏನು ಕೊರತೆ ಇತ್ತು, ಅದು ನಿಮ್ಮ ಗಮನಕ್ಕೆ ಬಂದಿದೆ. ಹಾಗೆ ನಿಮ್ಮ ಗಮನಕ್ಕೆ ಬಂದಮೇಲೆ ಆ ಕೊರತೆಯನ್ನು ನಿವಾರಿಸುವುದಕ್ಕೆ ನೀವು ಏನೂ ಕೆಲಸವನ್ನು ಮಾಡಿಲ್ಲ. ನನ್ನ ಪ್ರಶ್ನೆ ಬಂದಮೇಲೆ ಗಮನಿಸಲಾಗಿದೆ ಎಂದು ನೀವು ಎಚ್ಚೆತ್ತು ಕೊಂಡಿದ್ದುದು ಇದೆ. ಈಗ ಒಂದು ಆಸ್ಪತ್ರೆ ಏನಿದೆ ಅದನ್ನು ಮೇಲ್ದರ್ಜೆಗೆ ಏರಿಸಿ ಸಿಬ್ಬಂದಿಗಳಿಗೆ ವಸತಿ ಗೃಹ ಕೊಟ್ಟು ಅಲ್ಲಿನ ಕೊರತೆಯನ್ನು ನಿವಾರಿಸಬೇಕೆಂದು ಸರ್ಕಾರ ಅಥವಾ ಸಂಬಂಧಪಟ್ಟ ಖಾತೆ ಕ್ರಮ ಕೈಗೊಳ್ಳದಿದ್ದರೆ ಮತ್ತೆ ನೋಡಿಕೊಳ್ಳಲಾಗುವುದೆಂದು ಪ್ರಶ್ನೆ ಬಂದಾಗ ನೀವು ಉತ್ತರವನ್ನು ಕೊಡುವುದಾದರೆ ನೀವು ಉತ್ತರವನ್ನು ಕೊಟ್ಟು ಅದನ್ನು ಎಲ್ಲಿ ಕೈಬಿಡುತ್ತೀರೋ ಎಂಬ ಭಯವಿದೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಉಪಾಧ್ಯಕ್ಷರೆ, ನಾವು ಉತ್ತರವನ್ನು ಸ್ಪಷ್ಟವಾಗಿ ಕೊಟ್ಟಿದ್ದೇವೆ. ಸುರತ್ಕಲ್ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವಂತಹ ವಿಚಾರದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ

ಮತ್ತೆ ಅಲ್ಲಿ ಹೊಸದಾಗಿ ಕಟ್ಟಡವನ್ನು ಕಟ್ಟಿಸಿ ಕೊಟ್ಟಿದ್ದೇವೆ. ಆದರೆ ಅಲ್ಲಿ ಜಾಗ ಬಹಳ ಕಡಿಮೆ ಇದೆ, ಐದು ಸೆಂಟಿ ಜಾಗವನ್ನು ಮಾತ್ರ ಕೊಟ್ಟಿದ್ದಾರೆ, ಅಂದರೆ 40-60 ಅಳತೆಯ ಸೈಟ್ ಆಗುತ್ತದೆ. ಅಲ್ಲಿ ಆಸ್ಪತ್ರೆಗೆ ಕಟ್ಟಡವನ್ನು ಒದಗಿಸುತ್ತೀರೋ ಎಂದು ಕೇಳಿದ್ದಾರೆ. ಈಗ ಆಸ್ಪತ್ರೆಗೆ ಒಂದು ಸೈಟ್ ಇದೆ, ಅದು ಸಾಕಾಗುವುದಿಲ್ಲ. ಮುಂದೆ ಕಟ್ಟಡವನ್ನು ಒದಗಿಸುವುದಕ್ಕೆ, ಬೇರೆ ವಸತಿ ಗೃಹಗಳನ್ನು ಒದಗಿಸುವುದಕ್ಕೆ ಜಾಗವಿಲ್ಲ. ತಾವು ಆ ಜಾಗವನ್ನು ಒದಗಿಸುವುದಕ್ಕೆ ಮುಂದೆ ಬಂದರೆ ಸರ್ಕಾರ ಅದನ್ನು ಪರಿಶೀಲಿಸುತ್ತದೆ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಜಾಗವಿಲ್ಲದೆ ಕೆಲಸ ತಡವಾಗುತ್ತಿದೆ ಎಂಬ ವಿಚಾರವನ್ನು ನೀವು ಸಂಬಂಧಪಟ್ಟವರಿಗೆ ತಿಳಿಸಿದ್ದೀರೋ? ಅಲ್ಲನ ಜಿಲ್ಲಾ ಪಂಚಾಯತ್‌ಗಾಗಲಿ ಅಥವಾ ಶಾಸಕರಿಗಾಗಲಿ ಜಾಗವನ್ನು ಒದಗಿಸಿಕೊಡಿ ಎಂದು ಕೇಳಿದ್ದರೆ ಅದು ಸರಿಯಾಗುತ್ತಿತ್ತು. ನೀವು ಇದನ್ನು ಕೇಳಿಲ್ಲ, ನಾನು ಈಗ ಕೇಳಿದ್ದಕ್ಕೆ ಹೀಗೆ ಹೇಳುತ್ತಿದ್ದೀರಿ. ಇದು ಎಷ್ಟು ಸಮಯಕ್ಕೆ ಆಗುವಂತಹ ಕೆಲಸವೆಂಬುದನ್ನು ತಿಳಿಸಬೇಕು. ಇಲ್ಲಿ ಏನು ಕೊರತೆಯಾಗಿದೆಯೋ, ಅದು ನಿರಂತರವಾಗುತ್ತಿದೆಯಲ್ಲಾ ಎಂಬುದು ನನ್ನ ನೋವು.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಇದನ್ನು ಪರಿಶೀಲಿಸುತ್ತದೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಅಲ್ಲಿ ಅಗತ್ಯವಾದ ಜಾಗ ಎಷ್ಟು ಬೇಕು, ಅದನ್ನು ಕೂಡ ಸರ್ಕಾರ ಪಡೆಯಲು ಪ್ರಯತ್ನ ಮಾಡುತ್ತಿದೆ. ಇದಕ್ಕೆ ತಾವೂ ಕೂಡ ಸಹಕಾರವನ್ನು ಕೊಡಬೇಕು ಎಂದು ಕೇಳಿಕೊಂಡು ಅಲ್ಲಿ ಅಗತ್ಯವಿರುವಂತಹ ಕಟ್ಟಡವನ್ನು ಒದಗಿಸುವುದಕ್ಕೆ ಜಿಲ್ಲಾ ಪಂಚಾಯತ್ ಮತಿಯಿಂದ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಉಪಾಧ್ಯಕ್ಷರೆ, ಕೊನೆಯದಾಗಿ ಪಶುವೈದ್ಯಾಲಯದ ಸಿಬ್ಬಂದಿಗಳು ಸಾರ್ವತ್ರಿಕ ರಜಾ ದಿನಗಳಲ್ಲೂ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಈ ಸಿಬ್ಬಂದಿಗಳು ರಜಾದಿನಗಳಲ್ಲೂ ಸೇವೆ ಸಲ್ಲಿಸುವಾಗ, ಸೇವೆ ಸಲ್ಲಿಸಿದ್ದಕ್ಕೆ ಫಲವಾಗಿ ಅವರಿಗೆ ಏನಾದರೂ ಅನುಕೂಲವನ್ನು ಒದಗಿಸುವುದಕ್ಕೆ ಸಾಧ್ಯವೇ? ನಿಮ್ಮ ಖಾತೆಯಲ್ಲಿ ಹಾಗೆ ಒಂದು ಪದ್ಧತಿ ಇಲ್ಲದೇ ಇದ್ದರೆ ರೂಪಿಸಬಾರದೇಕೆ? ಕೆಲಸ ದಿನಗಳಲ್ಲೇ ಜನರು ಕೆಲಸ ಮಾಡುವುದಕ್ಕೆ ತಪ್ಪಿಸಿಕೊಳ್ಳುವ ಕಾಲದಲ್ಲಿ ಇವರ ಸೇವಾವಧಿಯ ಗಂಟೆಗಳು ಏನಿದ್ದಾವೆ, ಅದನ್ನು ಪೂರೈಸಿಬಿಟ್ಟು ರಜೆ ದಿನಗಳಲ್ಲೂ ಕೂಡ ಸೇವೆ ಸಲ್ಲಿಸುತ್ತಾರೆಂದ ಮೇಲೆ, ಹಾಗೆ ಪದ್ಧತಿ ನಡೆದುಕೊಂಡು ಬಂದಿದೆ ಎಂದು ಹೇಳಿದರೆ ಸರಿಯೇ? ಎಲ್ಲೆಲ್ಲಾ ಓವರ್ ಟೈಂ ಕೇಳುತ್ತಿದ್ದಾರೆ, ಓವರ್ ಟೈಂಗೆ ಕೊಡಬೇಡಿ, ರಜಾ ದಿನಗಳಲ್ಲಿ ಅವರು ಏನು ಕೆಲಸ ಮಾಡುತ್ತಾರೆ, ಅದಕ್ಕೆ ಏನಾದರೂ ಒಂದು ವಿಶೇಷ ಅನುದಾನವನ್ನು ಕೊಡುವುದಕ್ಕೆ, ರಜಾದಿನಗಳಲ್ಲಿ ಕೆಲಸ ಮಾಡಿದ್ದಕ್ಕೆ ಅಷ್ಟೋ ಇಷ್ಟೋ ಶಾಖಾಯ ಲವಣಾಯ ಕೊಡಬೇಕು. ಪಶುವೈದ್ಯ ಶಾಲೆಗಳಲ್ಲಿ ಏನು ಸಿಗುತ್ತದೆ? ಉಳಿದ ಕಡೆ ಏನಾದರೂ ಸಿಗುತ್ತದೆ. ಜಾನುವಾರುಗಳ ಕ್ಷೇಮ ಮುಖ್ಯ, ಮನುಷ್ಯರ ಕ್ಷೇಮ ಮುಖ್ಯ ಈ ಎರಡು ಆಸ್ಪತ್ರೆಗಳಲ್ಲಿ ಬಹಳ ವ್ಯತ್ಯಾಸ ಮಾಡಬೇಡಿ. ಅಲ್ಲಿ ಡಾಕ್ಟರ್ ಓವರ್ ಟೈಂ ಡ್ಯೂಟಿ ಮಾಡಿದರೆ ಅವರಿಗೆ ಕೊಡುತ್ತೀರಿ, ರಜಾದಿನಗಳಲ್ಲಿ ಅವರಿಗೆ ಸಂಬಳಕೊಡುತ್ತೀರಿ, ಇವರಿಗೆ ರಜಾದಿನಗಳಲ್ಲಿ ದುಡಿಯುವುದು ಮಾತ್ರವಾಗುತ್ತದೆ.

ಶ್ರೀ ಬಿ.ಬಿ. ನಿಂಗಯ್ಯ : ಸನ್ಮಾನ್ಯ ಉಪಾಧ್ಯಕ್ಷರೆ, ಅವರು ಬಹಳ ಪ್ರಮುಖವಾದ ವಿಚಾರವನ್ನು ಹೇಳಿದ್ದಾರೆ. ಜಾನುವಾರು ಆರೋಗ್ಯ ಮತ್ತು ಜನರ ಆರೋಗ್ಯ ಎರಡು ಪ್ರಮುಖವಾದ ಕ್ಷೇತ್ರಗಳೆಂದು ತಮಗೆ ಗೊತ್ತಿದೆ. ಇದು ಅಗತ್ಯಸೇವೆ ಅಡಿಯಲ್ಲಿ ಬರುತ್ತದೆ. ಹಾಗಾಗಿ ಇವತ್ತು ಜನಾರೋಗ್ಯ ಇಲಾಖೆಯಲ್ಲಿ ಶನಿವಾರ, ಭಾನುವಾರವೂ ಕೂಡ, ರಜಾದಿನಗಳಲ್ಲಿ ಮಧ್ಯಾಹ್ನದವರೆಗೆ ಏನು ಕೆಲಸ ಮಾಡುತ್ತಾರೆ. ಅದೇ ರೀತಿಯಲ್ಲಿ ಅಷ್ಟೇ ಪ್ರಮುಖವಾದ ಒಂದು ಈ ಕ್ಷೇತ್ರವಾದ್ದರಿಂದ ಜಾನುವಾರು ಆರೋಗ್ಯ ಪ್ರಮುಖವೆಂದು ಸರ್ಕಾರ ಇದನ್ನು ಪರಿಗಣಿಸಿದ್ದರಿಂದ ಭಾನುವಾರ ಅಥವಾ ರಜೆದಿನಗಳಲ್ಲಿ ಎಂಟೂವರೆ ಗಂಟೆಯಿಂದ ಹನ್ನೆರಡೂವರೆ ಗಂಟೆಯವರೆಗೆ ಕೆಲಸ ಮಾಡುವುದು ಮೊದಲಿನಿಂದಲೂ ಬಂದಿದೆ. ಈಗ ತಾವೇನು ಸಲಹೆಯನ್ನು ಹೇಳಿದ್ದೀರಿ ಇದನ್ನು ಸರ್ಕಾರ ಪರಿಶೀಲಿಸುತ್ತದೆ.

ರಾಷ್ಟ್ರೀಯ ಮಟ್ಟದ ಸೈಕ್ಲಿಂಗ್ ಸ್ಪರ್ಧೆ

183 - ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟಾ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇತ್ತೀಚೆಗೆ ನಡೆದ ರಾಷ್ಟ್ರೀಯ ಮಟ್ಟದ ಸೈಕ್ಲಿಂಗ್ ಸ್ಪರ್ಧೆಯಲ್ಲಿ ರಾಜ್ಯದ ಕ್ರೀಡಾ ಪಟುಗಳು ರಾಜ್ಯಕ್ಕೆ ಕೀರ್ತಿ ತರುವ ಪ್ರಶಸ್ತಿಗಳನ್ನೇನಾದರೂ ಪಡೆದಿದ್ದಾರೆಯೇ?*

ಆ) *ಎಷ್ಟು ಪ್ರಶಸ್ತಿಗಳನ್ನು ಪಡೆದಿದ್ದಾರೆ ಹಾಗೂ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯವರಾಗಿದ್ದಾರೆ ಅವರ ಪೂರ್ತಿ ವಿವರ ಕೊಡುವುದು?*

ಇ) *ಬಿಜಾಪುರ ಸೈಕಲ್ ಪಟುಗಳಿಗೆ ವೆಲೊಡ್ರೊಮ್‌ನ ಕೊರತೆ ಇದೆಯೇ? ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮ ಏನು? ಹಾಗೂ ಸರ್ಕಾರವು ಅವರಿಗಾಗಿ ಕೊಟ್ಟಂತಹ ಉತ್ತೇಜನ ಏನು?*

ಶ್ರೀ ಅಜಯ್‌ಕುಮಾರ್ ಸರನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಹೌದು

ಆ) ವಿವರಗಳನ್ನು ಲಗತ್ತಿಸಿದೆ. ಪದಕ ಪಡೆದ ಎಲ್ಲಾ ಸೈಕಲಿಸ್ಟ್ (ಸೈಕಲ್ ಪಟುಗಳು) ಬಿಜಾಪುರ ಜಿಲ್ಲೆಯವರಾಗಿರುತ್ತಾ ರೆ.

ಇ) ಹೌದು. ಅದಕ್ಕಾಗಿ 10ನೇ ಹಣಕಾಸು ಆಯೋಗದಲ್ಲಿ ರೂ. 20.00 ಲಕ್ಷ ಹಣವನ್ನು ಇಟ್ಟಿದ್ದು ಕೇಂದ್ರ ಸರ್ಕಾರದ ಅನುದಾನ ಪಡೆಯಲು ಕ್ರಮಕೈಗೊಳ್ಳಲಾಗುತ್ತಿದೆ. ಸೈಕಲ್ ಪಟುಗಳು ರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಸಹಾಯಧನ ನೀಡಲಾಗುತ್ತದೆ. ಮತ್ತು ಪ್ರತಿಭಾವಂತ ಸೈಕಲ್ ಪಟುಗಳನ್ನು ಇಲಾಖೆಯ ನಡೆಸುತ್ತಿರುವ ಕ್ರೀಡಾ ಹಾಸ್ಟೆಲ್‌ಗಳಲ್ಲಿ ಸೇರಿಸಿಕೊಂಡು ವಿದ್ಯೆ ಮತ್ತು ವೈಜ್ಞಾನಿಕ ಕ್ರೀಡಾ ತರಬೇತಿ ನೀಡಲಾಗುತ್ತಿದೆ. ಇದಕ್ಕಾಗಿ ತಗಲುವ ಎಲ್ಲಾ ವೆಚ್ಚಗಳನ್ನು ಸರ್ಕಾರ ಭರಿಸುತ್ತದೆ.